# ಖಾದಿ ಸೀರೆ ಅಲ್ಲ ಖಾದಿ ಸಿಲ್ಕ್ ಸೀರೆ!

**ಖಾದಿ ಸೀರೆ ಉಡಲು ಸೊಗಸು. ಇದೀಗ ಖಾದಿ ಸೀರೆಯನ್ನೂ ಮೀರಿಸಿ ಅಂದದ ಖಾದಿ ಸಿಲ್ಕ್ ಸೀರೆ ಬಂದಿದೆ. ಫ್ಯಾಷನ್ ಟ್ರೆಂಡ್ ಅನ್ನೂ ಸೃಷ್ಟಿಸಿದೆ.**

**ಉಮಾ ಅನಂತ್**



ಹಗುರವಾದ, ಕಾಟನ್ ಮಾದರಿಯ ಸೀರೆ ಬಯಸುವ ಎಲ್ಲ ಮಹಿಳೆಯರಿಗೆ ಖಾದಿ ಸೀರೆ ಬಹಳ ಇಷ್ಟವಾಗುತ್ತದೆ. ಇದರಲ್ಲೇ ಸ್ವಲ್ಪ ಗ್ರ್ಯಾಂಡ್ ಆಗಿ ಕಾಣಬೇಕೆಂದರೆ ಸಣ್ಣ ಪುಟ್ಟ ಸಮಾರಂಭಗಳಿಗೂ ಉಡಲು ಸೂಕ್ತವೆನಿಸುವ ಖಾದಿ ಸಿಲ್ಕ್ ಈಗೀಗ ಹೆಚ್ಚು ಜನಪ್ರಿಯತೆಯ ಹಾದಿ ಹಿಡಿದಿದೆ.

ಉದ್ಯೋಗಕ್ಕೆ ಎರಳುವ ಯುವತಿಯರಿಗೆ, ಕಾಲೇಜು ಕನ್ಯೆಯರಿಗೆ ಖಾದಿ ಸಿಲ್ಕ್ ಸೀರೆ ಅಚ್ಚುಮೆಚ್ಚು. ಇದರ ಸುಂದರ ಜರಿಯಂಚು, ಪಲ್ಲು ಕೊನೆಗಿರುವ ಕುಚ್ಚು, ಅದಕ್ಕೊಪ್ಪುವ ರವಿಕೆ ಸಖತ್ ಲುಕ್ ಕೊಡುವುದರಲ್ಲಿ ಸಂಶಯವಿಲ್ಲ. ಖಾದಿ ಸಿಲ್ಕ್ ಸೀರೆಯುಡಲು ಹಬ್ಬಗಳೇ ಬೇಕಿಲ್ಲ, ಶುಭ ಸಮಾರಂಭಗಳೂ ಆಗಬೇಕಿಲ್ಲ. ನಿತ್ಯವೂ ಉಡಬಹುದು. ಧರಿಸಲು ಆರಾಮದಾಯಕ, ಬೇಗನೆ ಸುಕ್ಕುಗಟ್ಟುವುದಿಲ್ಲ, ಬೇಕಾದ ಶೇಡ್‌ಗಳಲ್ಲಿ ಲಭ್ಯ.. ಇವೆಲ್ಲ ಖಾದಿ ಸಿಲ್ಕ್ ಸೀರೆಯ ಪ್ಲಸ್ ಪಾಯಿಂಟ್. ರಾಯಲ್ ಲುಕ್ ಪಡೆಯಲು ಖಾದಿ ಸಿಲ್ಕ್ ಹೇಳಿ ಮಾಡಿಸಿದ ಸೀರೆ.

ರೇಷ್ಮೆ ಸೀರೆಗಳ ವೈವಿಧ್ಯಗಳಾದ ಮೈಸೂರು ಸಿಲ್ಕ್, ಪಟೋಲ, ಮಹೇಶ್ವರಿ, ಪೈಠಣಿ, ಪೋಚಂಪಲ್ಲಿ, ಜಾಮ್ದಾನಿ, ಕಥಾನ್, ಬಾಲುಶಾರಿ, ಭಾಗಲ್ಪುರಿ... ಮುಂತಾದವುಗಳಿಗೆ ಪೈಪೋಟಿ ನೀಡಲೆಂದೇ ಖಾದಿ ಸಿಲ್ಕ್ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ ಎನ್ನಬಹುದು. ಖಾದಿ ವೈವಿಧ್ಯಗಳೆಂದರೆ ಖಾದಿ ಕಾಟನ್, ಖಾದಿ ಪ್ರಿಂಟೆಡ್ ಸಿಲ್ಕ್, ಖಾದಿ ಪಟ್ಟು... ಇವುಗಳಿಗೊಂದು ಸೇರ್ಪಡೆಯಾದದ್ದು ಗರಿಗರಿಯಾದ ಖಾದಿ ಸಿಲ್ಕ್ ಸೀರೆ.

ಫ್ಯಾಷನಬಲ್ ಮಹಿಳೆಯರು, ಹುಡುಗಿಯರು, ಸಿನಿಮಾ ತಾರೆಯರು ಖಾದಿ ಸಿಲ್ಕ್ ಸೀರೆಯತ್ತ ಒಲವು ತೋರಲಾರಂಭಿಸಿದ್ದಾರೆ. ಹದಿ ವಯಸ್ಸಿನ ಹುಡುಗಿಯರಿಂದ ಹಿಡಿದು ಫ್ಯಾಷನ್ ಬಯಸುವ ಎಲ್ಲರೂ ಖಾದಿ ಸಿಲ್ಕ್ ಸೀರೆ ಇಷ್ಟ ಪಡುವವರೇ. ಪಶ್ಚಿಮ ಬಂಗಾಳ, ಛತ್ತೀಸ್‌ಗಡ ಮುಂತಾದ ರಾಜ್ಯಗಳಲ್ಲಿ ಅತ್ಯುತ್ತಮ ಗುಣಮಟ್ಟದ ಖಾದಿ ಸಿಲ್ಕ್ ಸೀರೆ ಸಿಗುತ್ತದೆ. ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಖಾದಿಯಿಂದ ನೇಯ್ದ ಸೀರೆ, ಕೈಮಗ್ಗದ ಸಲ್ವಾರ್‌ಗಳು ಹೊಸ ಆಕರ್ಷಕ ಮಾದರಿಗಳಲ್ಲಿ ಸಿಗುತ್ತದೆ. ಆಧುನಿಕ ಜೀವನಶೈಲಿಗೆ ಒಗ್ಗುವಂತೆ ಖಾದಿ ಉಡುಗೆ ಇದೀಗ ಮಾರುಕಟ್ಟೆಯಲ್ಲಿ ಲಭ್ಯ.

## ಸಾದಾ ಖಾದಿ; ಏನಿದರ ವಿಶೇಷ?

ಖಾದಿ ಸಿಲ್ಕ್ ಸೀರೆಯಂತೆ ಸಾದಾ ಖಾದಿ ಕೂಡ ಬಹಳ ಜನಪ್ರಿಯತೆಯ ಹಾದಿ ಹಿಡಿದಿದೆ. ಖಾದಿ ಬಟ್ಟೆ ಮೊದಲ ಬಾರಿಗೆ ಒಗೆದಾಗ ಹಿಂಜಿದಂತೆ ಆಗುತ್ತದೆ. ಇದನ್ನು ತಪ್ಪಿಸಲು ಒಗೆದು, ನುರಿತ ಬಟ್ಟೆ ಕೆಲಸಗಾರರು